ಬಂದಿದ್ದ ನನಗೆ ಮೊದಲ ಹೆಜ್ಜೆಯಲ್ಲೇ ಹೀಗೆ ನನ್ನ ದೌರ್ಬಲ್ಯಗಳು ಬಯಲಾಗುತ್ತಿರುವುದನ್ನು ಕಂಡು ಬಾಯಿ ಕಟ್ಟಿದಂತಾಯಿತು.

"ಏನಾದರೂ ಮಾತಾಡಿ?"

ಮನದೊಳಗಿನ ತಾಕಲಾಟಗಳ ಸಹಿಸಲಾಗದೇ ಗೋಡೆಯ ಮೇಲಿನ ಪೇಂಟಿಂಗುಗಳನ್ನೇ ಮೌನವಾಗಿ ದಿಟ್ಟಿಸುತ್ತಾ ಕುಳಿತವನಿಗೆ ಹಾಗೆಂದಳು ವೈಶಾಲಿ. ಹೌದು... ಮಾತಾಡಬೇಕು... ತುಂಬಾ ಮಾತಾಡಬೇಕು! ಈ ದಿನ, ಈ ಕ್ಷಣ, ಈ ಭೇಟಿ ಮತ್ತೆ ಬರುವುದಿಲ್ಲ. ಈಗ ನಾನು ಆಡದೇ ಉಳಿಸುವ ಮಾತುಗಳೆಲ್ಲಾ ಮಾರ್ದನಿಗಳಾಗಿ ಜೀವನದುದ್ದಕ್ಕೂ ಕಾಡುತ್ತವೆ!

"ಅದೂ... ಮಾತನಾಡುವುದು ತುಂಬಾ ಇದೆ ವೈಶಾಲಿಯವರೇ. ಎಲ್ಲಿಂದ ಆರಂಭಿಸೋದು ಅಂತ ಗೊತ್ತಾಗ್ತಿಲ್ಲ."

ಅವಳ ಮುಖದ ನುಣುಪನ್ನೇ ದಿಟ್ಟಿಸುತ್ತಾ ಹೇಳಿದೆ.

"ಒಂದು ಕೆಲಸ ಮಾಡಿ, ಗಣೇಶ ಸ್ತುತಿಯೊಂದಿಗೆ ಆರಂಭಿಸಿ!"

ಅಷ್ಟು ಹೇಳಿದ ವೈಶಾಲಿ ದೊಡ್ಡದಾಗಿ ನಕ್ಕಳು. ಅಯ್ಯೋ ಇವಳಾ! ನನ್ನ ಆತಂಕವನ್ನು ಅರ್ಥಮಾಡಿಕೊಳ್ಳದೇ ತಮಾಷೆ ಮಾಡುತ್ತಿದ್ದಾಳಲ್ಲಾ ಎನಿಸಿತಾದರೂ ಅವಳ ಹಾಸ್ಯಕ್ಕೆ ನಗದಿರುವುದು ತಪ್ಪೆಂದೆನಿಸಿ ಬಲವಂತವಾಗಿ ನಕ್ಕೆ.

"ನೈಸ್ ಜೋಕ್. ಆದ್ರೆ... ನಿಜ ಹೇಳ್ತಿದೀನಿ ವೈಶಾಲಿಯವ್ರೇ. ಮದುವೆಯೆಂದರೆ, ಸಂಸಾರವೆಂದರೆ ನಿಮಗೆ ನಿಮ್ಮದೇ ಆದ ಕಲ್ಪನೆಗಳಿರುತ್ತವೆ. ನಿಮ್ಮ ಭವಿಷ್ಯದ ಗಂಡನ ಬಗ್ಗೆ ನಿಮ್ಮದೇ ಆದ ನಿರೀಕ್ಷೆಗಳಿರುತ್ತವೆ. ಆದರೆ... ಎಲ್ಲೋ ಒಂದು ಕಡೆ ಆ ನಿರೀಕ್ಷೆ, ಕನಸುಗಳಿಗೆ ನಾನು ನ್ಯಾಯ ಒದಗಿಸಬಲ್ಲೆನಾ ಅನ್ನೋ ಅನುಮಾನ ನನ್ನೊಳಗೆ ಸಣ್ಣಗೆ ಕೊರೆಯುತ್ತಿದೆ."

ಆಸಕ್ತಿಯಿಂದ ನನ್ನನ್ನೇ ನೋಡುತ್ತಿದ್ದವಳೆದುರು ಮಾತು ಮುಂದುವರೆಸಿದೆ.

"ನಾನು ಕೆಲಸ ಮಾಡ್ತಿರೋ ಕಂಪನಿ, ನನ್ನ ಹುದ್ದೆ, ಇವನ್ನೆಲ್ಲಾ ನೋಡಿ ನೀವು ನನ್ನ ತುಂಬಾ ಚುರುಕಿನ, ಲವಲವಿಕೆಯವನು ಅಂತ ಅಂದುಕೊಂಡಿರಬಹುದು. ಆದರೆ, ವೈಶಾಲಿಯವರೇ... ಸಾಮಾನ್ಯರಲ್ಲೇ ಸಾಮಾನ್ಯ ವ್ಯಕ್ತಿ ನಾನು. ನನಗೆ ಕಾರು, ಬೈಕುಗಳು ಬೇಕೆಂಬ ಐಶಾರಾಮಿ ಆಸೆಗಳಿಲ್ಲ. ಸ್ವತಂತ್ರವಾಗಿ, ನನ್ನ ಪಾಡಿಗೆ ನಾನು ಬದುಕಲಿಕ್ಕೆ ಎಷ್ಟು ಬೇಕೋ ಅಷ್ಟು ಸಿಕ್ಕಿದರೆ ಸಾಕು ಎಂಬ ಮನಃಸ್ಥಿತಿ ನನ್ನದು. ಮುನ್ನುಗ್ಗಿ ಹೋಗುವುದು, ನಾಲ್ಕು ಜನರೆದುರು ಧೈರ್ಯವಾಗಿ ಮಾತನಾಡುವುದು... ಇವೆಲ್ಲಾ ನನ್ನ ಡಿಕ್ಷನರಿಯಲ್ಲಿಲ್ಲದ ಪದಗಳು. ಹೀಗೆಲ್ಲಾ ಇರುವ ನನ್ನನ್ನು ನೀವು ಮದುವೆಯಾಗಲು ಒಪ್ಪಿದ್ದು ನನಗೆ ಆಶ್ಚರ್ಯವನ್ನುಂಟುಮಾಡಿತು." ಮಾತಿಗೆ ಅಲ್ಪ ವಿರಾಮವಿಟ್ಟು ಅವಳತ್ತ ನೋಡತೊಡಗಿದೆ.

"ಏನು? ಮದುವೆಗೆ ಒಪ್ಪಿದ್ದಾ? ನಾನೆಲ್ಲಿ ಒಪ್ಪಿದೆ?"

ಕಿವಿಯನ್ನು ಮೆದುಳು ನಂಬಲಾಗದಂತಹ ಪ್ರಶ್ನೆ ಕೇಳಿದಳು ವೈಶಾಲಿ.

"ನೀವು ಒಪ್ಪಿದ್ದೀರ, ಇನ್ನೇನು ನಿಮ್ಮ ಕಡೆಯವರು ನಮ್ಮ ಮನೆ ನೋಡಲಿಕ್ಕೆ ಬರುತ್ತಾರೆ ಅಂತ ಬ್ರೋಕರ್ ಹೇಳಿದರಲ್ಲಾ?"

ಆಗಿರುವ ಆಘಾತವನ್ನು ಕಣ್ಣಲ್ಲಿ ಪ್ರಕಟಿಸುತ್ತಾ ನುಡಿದೆ.

"ಸಾರಿ ಸಾತ್ವಿಕ್... ಮನೆ ನೋಡಲಿಕ್ಕೆ ಬರುವುದು ನಿಜ. ಆದರೆ, ಮದುವೆಗೆ ನಾನಿನ್ನೂ ಹೂಂ ಅಂದಿಲ್ಲ. ಮನೆ ನೋಡಿ ಬನ್ನಿ, ಅಷ್ಟರೊಳಗೆ ನಾನು ಹುಡುಗನ ಜೊತೆಗೆ ಒಮ್ಮೆ ಮಾತನಾಡಿ ಒಂದು ನಿರ್ಧಾರಕ್ಕೆ ಬರುತ್ತೇನೆ ಅಂದಿದ್ದೆ. ಬಹುಶಃ ಅದನ್ನು ತಪ್ಪಾಗಿ ಅರ್ಥಮಾಡಿಕೊಂಡ ಬ್ರೋಕರ್ ನಿಮಗೆ ಹಾಗೆ ಹೇಳಿದ್ದಾನೆ."